4. ಪುಷ್ಪೋದ್ಯಮವನ್ನು ಪ್ರೋತ್ಸಾಹಿಸುವ ಸಲುವಾಗಿ ಪುಷ್ಪ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸಲು ಇಚ್ಚಿಸುವ ಬೆಳಿಗಾರರ ಸಂಘ ಸಂಸ್ಥೆಗಳಿಗೆ ಮೂಲಭೂತ ಸೌಕರ್ಯವನ್ನು ಅಭಿವೃದ್ಧಿ ಪಡಿಸಲು ಸಹಾಯಧನ ನೀಡಲಾಗುವುದು.
5. ಇಲಾಖಾವತಿಯಿಂದ ವಾಣಿಜ್ಯ ಪುಷ್ಪ ಕೃಷಿ ಕಿರು ಪುಸ್ತಕ ಹಾಗೂ ಕಿರು ಹೊತ್ತಿಗೆಗಳನ್ನು ಮುದ್ರಿಸಿ ಆಸಕ್ತ ರೈತರಿಗೆ ತಾಂತ್ರಿಕ ತಿಳುವಳಿಕೆ ನೀಡಲಾಗುತ್ತಿದೆ.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನ್ಯಾಯ ಬೆಲೆ ಅಂಗಡಿ ನಿರ್ವಹಣೆ

1386 (1664) ಶ್ರೀ ಎ.ಎಸ್.ಗುರುಸ್ವಾಮಿ (ಚಾಮುಂಡೇಶ್ವರಿ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕಿನ ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ನ್ಯಾಯ ಬೆಲೆ ಅಂಗಡಿಗಳು ಇವೆ;

ಆ) ಹೊಸದಾಗಿ ಎಷ್ಟು ನ್ಯಾಯಬೆಲೆ ಅಂಗಡಿ ಪ್ರಾರಂಭಿಸಲು ಪ್ರಸ್ತಾವನೆ ಸ್ವೀಕರಿಸಲಾಗಿದೆ.;

ಇ) ಹೊಸದಾಗಿ ಎಷ್ಟು ನ್ಯಾಯ ಬೆಲೆ ಅಂಗಡಿ ಪ್ರಾರಂಭಿಸಲು ಅನುಮತಿ ನೀಡಲಾಗಿದೆ; ಇಲ್ಲದಿದ್ದಲ್ಲಿ, ಎಂದು ಅನುಮತಿ ನೀಡಲಾಗುವುದು; ವಿಳಂಬಕ್ಕೆ ಕಾರಣಗಳೇನು?

ಈ) ಇನ್ನು ಎಷ್ಟು ನ್ಯಾಯಬೆಲೆ ಅಂಗಡಿ ಪ್ರಾರಂಭಿಸಲು ಅವಕಾಶವಿದೆ?

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) 101 ನ್ಯಾಯಬೆಲೆ ಅಂಗಡಿಗಳು ಇವೆ

ಆ) ಎರಡು

ಇ) ಜನವರಿ 2002 ರಿಂದ ಈಚೆಗೆ ಮೈಸೂರು ತಾಲ್ಲೂಕಿನಲ್ಲಿ 23 ನ್ಯಾಯಬೆಲೆ ಅಂಗಡಿಗಳನ್ನು ಪ್ರಾರಂಭಿಸಲು ಈಗಾಗಲೇ ಅನುಮತಿ-ಯನ್ನು ನೀಡಲಾಗಿದೆ.

ಈ) ನ್ಯಾಯಬೆಲೆ ಅಂಗಡಿಗಳನ್ನು ಪಡಿತರ ಚೀಟಿದಾರರ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಮತ್ತು ಸ್ಥಳೀಯರ ಬೇಡಿಕೆಯನ್ನು ಆಧರಿಸಿ ಪ್ರಾರಂಭಿಲಾಗುವುದು. ಇದೊಂದು ನಿರತಂರ ಕ್ರಿಯೆ ಆಗಿರುತ್ತದೆ.

ಜಿಲ್ಲಾ ಸಹಕಾರಿ ಅಭಿವೃದ್ಧಿ ಬ್ಯಾಂಕ್‌ಗಳ ಕಾರ್ಯ ನಿರ್ವಹಣೆ

1387 (1665) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ): ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಡಿಸಿಸಿ ಬ್ಯಾಂಕ್‌ಗಳ ನೌಕರರು ಒಂದೇಕಡೆ ಕೆಲಸಕ್ಕೆ ಸೇರಿ ಅಲ್ಲಿಯೇ ನಿವೃತ್ತಿ ಹೊಂದುವುದರಿಂದ ಸ್ವಹಿತಾಸಕ್ತಿ ಬೆಳೆಸಿಕೊಳ್ಳಲು ಕಾರಣವಾಗುವುದಿಲ್ಲವೇ, ಅಪೆಕ್ಸ್ ಬ್ಯಾಂಕ್ ರೀತಿಯಲ್ಲಿ ಈ ನೌಕರರ ವರ್ಗಾವಣೆಗೆ ಏನು ಕ್ರಮ ಕೈಗೊಳ್ಳಲಾಗಿದೆ.

2) ಡಿಸಿಸಿ ಬ್ಯಾಂಕ್‌ಗಳ ನೌಕರರ ಜೇಷ್ಠತೆ ಕಾಪಾಡಿಕೊಳ್ಳಲು ಮತ್ತು ಉತ್ತರದಾಯಿತ್ವ ಸ್ಥಾಪಿಸಲು ವರ್ಗಾವಣೆ ಅನಿವಾರ್ಯವಲ್ಲವೆ?

3) ಷೆಡ್ಯೂಲ್ ಬ್ಯಾಂಕ್‌ಗಳ ರೀತಿ ಡಿಸಿಸಿ ಬ್ಯಾಂಕ್‌ಗಳು ಸಹ ಕೆಲಸ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?